**ಕಥೆ**



**ಪಿ. ನಂದಕುಮಾರ್**

ಕಲೆ: ಸಂತೋಷ್ ಸಸಿಹಿತ್ಲು

# ನಾಲಿನ ಕಾಲ್ಮರಿ

ಸೂರ್ಯ ಮುಳ್ಗೊ ಹೊತ್ತಿನ್ಯಾಗ ಓಣಿ ತುಂಬಾ ಬರೀ ಜಗದ ಮಲ್ಲವ್ವ ಸತ್ತ ಸುದ್ದಿನಾsss ಮಾತಾಡ್ತಿದ್ರು. ಕುಂತಲ್ಲಿ ನಿಂತಲ್ಲಿ ಹಿರಿಯರಿಂದ ಹಿಡ್ದು ಪಾರಪಟ್ಟಿ ಹುಡುಗುರುತನ್ಕ ಆಕಿದsss ಮಾತು. ಬೇನಿ ಬೀಜ ಆಯ್ಯಾಕಂತ ಅಡ್ವಿಗಿ ಹೋಗಿದ್ದ ಸಾಮವ್ವ, ಬೇನಿ ಬೀಜ ಒಂದು ಗೊಬ್ರ ಚೀಲ್ದಾಗ ಹಾಕೊಂಡು, ಕಿರಿ ಮಗ್ಳಿಗಿ ಹರ್ಸ್ಸಿ, ಮಣ ಕಟ್ಗಿ ಹೊರಿ ತೆಲಿಮ್ಯಾಲ ಹೊತ್ಗೊಂಡು ತೇಕ ಬುಡ್ತಾ ಬಂದಕಿನೇ ಕಟ್ಗಿ ಹೊರಿ ಏಳ್ ಮಕ್ಳ ತಾಯಿದೇವ್ರ ಗುಡಿ ಸಂದ್ಯಾಗ ಒಗ್ದು, ಮನ್ಯಾನ ಕಸ- ಮುಸ್ರಿ ಮುಗಿಸಿ ಸಂಜಿ ಊಟಕ್ಕ ಪಲ್ಯಾ, ಟಮಟಿ ಸಾಂಬರ್ ಮಾಡಿಟ್ಟು ರೊಟ್ಟಿಬಂಡಿ ಹಾಕಿ ಜಿಗಿಗಂತ ನೀರ್ ಹಾಕಸ್ತ್ರಲ್ಲಿ, ಗೌಡ್ರ ಆಳ್ಮಗ 'ಏsss ತಿಪ್ವಾ... ತಿಪ್ಯಾ ಲೇ... ಲೇ ನಿಮೌನ್ ತಿಪ್ಯಾ' ಅಂತ ಮೂರ್ ಸಲ ಕರ್ದ. ರೊಟ್ಟಿ ಬಡೆಕಂತ ಕುಂತ ಸಾಮವ್ವ ಹೊರ್ಗ ಬಂದು 'ಯಪ್ಪ ಯಾಕ್ರೀ ಆತ ಮನ್ಯಾಗ ಇಲ್ರೀ' ಅಂದಳು. 'ಅದೇ ಬೆ... ಊರ್ ಗೌಡ್ರು ಹೆಂಡಿಕಸ್ಕ ಹೇಳಿ ಬಾ ಅಂತ ಕಳಸ್ಯಾರ' ಅಂದ. ಅದ್ಕ ಸಾಮವ್ವ ಬ್ಯಾರ್ದ ಮುಖ ಮಾಡ್ಕೊಂಡು, 'ಆಯ್ತ್ರೀ ಧಣಿ ಬರ್ತಿವ್ರಿ' ಅಂದಾಕಿನೇ ಮನಿ ಮಂದಿಗಿ ಆಗುವಷ್ಟು ರೊಟ್ಟಿ ಬಡದ್ಳು. ಅಷ್ಟ್ರಲ್ಲಿ ಗಂಡ ಬಂದ, ರೊಟ್ಟಿ ಬಂಡಿ ಎತ್ತಿಟ್ಟು, ಹೆಂಡಿಕಸ್ದ ಗುಂಗಿನ್ಯಾಗ ಹಿಟ್ಟಿನ ಕೈಲೆನೇ ಕುಡ್ದ ಬಂದ ಗಂಡ್ಗ, ವಯಸ್ಸಾದ ಅತ್ತಿ-ಮಾವ್ಗ, ಮಕ್ಕಳಿಗಿ ಉಣ್ಣಕ್ಕ ಕೊಟ್ಟು ತಾನಿಷ್ಟು ತಿಂದು ಹಾಸ್ಗಿ-ಪಾಸ್ಗಿ ಮಾಡಿ, ಅಲ್ಲೇ ಮಕ್ಕಂಡ ಸಾಮವ್ವಗ ಒಂದು ಜಂಪ್ ನಿದ್ದಿ ಆಗರ್ಲಕಿಲ್ಲ. ಮುಲ್ಲಾ ಕೂಗಿದ್ದ ಕೇಳಿ ಎದ್ದಕ್ಕೀನೆ ಮಾರಿ ಮ್ಯಾಲಿ ನೀರ್ ಹಾಕೊಂಡು, ಮನಿ ಜಂತ್ಯಾಗ ಸಿಗ್ಸಿದ್ದ ಕಡ್ಡಿ ಬರ್ಗಿ, ಜಂಪ್ಲಕ ಹರ್‍ಯಾಕಿದ ಟವಲ್ ತಗೊಂಡು ಮ್ಯಾಳ್ಗೀ ಮ್ಯಾಲ ಮಲ್ಗಿದ ಮಗ್ನಿಗಿ 'ಪರಸಪ್ಪ ಏ... ಎಪ್ಪ ಕಸ್ಕ ಹೊತಾಯ್ತು, ಏಳ್ಪಾ...' ಅಂತ್ಹೇಳಿ ಮಗ್ನ ಮಾರಿ ಮ್ಯಾಲಿನ ಕೌದಿ ತಗ್ದು ಎಬ್ಸಿದ್ಳು. ಚುಮು ಚುಮು ಚಳಿ ಬ್ಯಾರೆಮ್ಮೆ ಗೂಡ್ಸಿಗೊಂಡು 'ನಿದ್ದಿ ಬರಕತ್ಯಾದ' ಅಂದವ್ನೆ ಹಾಸ್ಗಿ ಮ್ಯಾಲಾಕ್ಕೊಂಡು ತೊಡಿಸಂದ್ಯಾಗ ಕೈ ಇಟ್ಕೊಂಡು ತಾ ಸಾಕಿದ ನಾಯಿಕುನ್ನಿ ಮಗ್ಲಕ ಎಳ್ಕೊಂಡು ಮಲ್ಕೊಂಡ. ಅವ್ರವ್ವ 'ಯಪ್ಪ ಇವತ್ತೊಂದಿನ ಬಾಪಾ... ನಾಳೀಗಿ ನಾ ಒಬ್ಬಾಕಿನೇ ಹೋಗ್ತಿನಿ' ಅಂತ ರಮಿಸಿ ಮತ್ತೆ ಎಬ್ಬಿಸಿದ್ಳು. ಬ್ಯಾಡಾದ ಮನ್ಸಲೇ ನಡ್ಗತಾ ತನ್ನ ನಾಯಿ ಕುನ್ನಿ ಕೊಂಕಳಲ್ಲಿ ಇಡ್ಕೊಂಡು ಅವ್ರವ್ವನಿಂದ ನಾಯಿ ಮರಿಬೆನ್ನ ಹತ್ತಿದಂಗ ಹಿಂದಿಂದ ಹೊಂಟ...!

ಮಬ್ಬಗತ್ತಲ ಬ್ಯಾರೆ ದೂರದಿಂದ ನರಿಗಳು ವದ್ರಾದ್ ಕೇಳಿದ್ರ ಎಂಥವ್ರ ಎದಿ ಆದ್ರೂ ಜಲ್ ಅಂತಾದ. ಅದ್ಕ ಸಾಮವ್ವ ಮಗ ಅಂಜ್ತಾನ ಅಂತ್ಹೇಳಿ ಅವ್ನಿಗಿ 'ಹಗ್ಲತ್ತಾದ್ರ ಸಾಲಿ-ಸಮುದ ಬಿಟ್ಟು ಉಡಾಳ್ ಹುಡುಗ್ರುಜೊತಿ ಬರೀ ಊರ್ ಸುತ್ತೋದು, ಸಂಜ್ಯಾದ್ರ ಸಾಕ್ ಸವರಾತ್ರಿ ತನ್ಕ ಜಗದ